ಪ್ರಪಂಚದಲ್ಲಿರುವವನು, ತಾನೆಲ್ಲಿ ಆಸೆಆಕಾಂಕ್ಷೆಗಳಿಗೆ ವಶನಾಗುವೆನೋ ಎಂದು ಎಚ್ಚರವಾಗಿರಬೇಕು. ಆಸೆಗಳಿಂದ ಪಾರಾಗ ಬೇಕಾದರೆ ಭಗವದನುರಾಗವನ್ನು ಹೆಚ್ಚಿಸಿಕೊಳ್ಳುವುದೊಂದೇ ಉಪಾಯ. ಶ್ರೀರಾಮಕೃಷ್ಣರು ಹೇಳುವಂತೆ, "ಕಾಶ್ಮೀರಿ ಶಾಲು ದೊರೆ ತಾಗ ಸಾಮಾನ್ಯ ಶಾಲು ಬೇಡವೆನಿಸುತ್ತದೆ." ಹಾಗೆಯೇ ಭಗವದನುರಾಗ ಅಧಿಕವಾದಂತೆ ಸಾಮಾನ್ಯ ಆಸೆಗಳೆಡೆಗೆ ಮನಸ್ಸು ಆಕರ್ಷಿತ ವಾಗುವುದಿಲ್ಲ.

**ವಾಸನೆಗಳನ್ನು ದಹಿಸಿಹಾಕು:** ಮನುಷ್ಯ ಸಾಧನೆಯನ್ನೇನೋ ಮಾಡುತ್ತಿರುತ್ತಾನೆ. ಆದರೆ ಸಾಧನೆಯ ಮಾರ್ಗದಲ್ಲಿ ಮುನ್ನಡೆಯು ವುದಿಲ್ಲ. ಇದನ್ನೇ ಯೋಗದಲ್ಲಿ 'ಅಲಬ್ಧಭೂಮಿಕತ್ವ' ಎನ್ನುತ್ತಾರೆ, ಇದಕ್ಕೆ ಕಾರಣವೇನು? ಶ್ರೀರಾಮಕೃಷ್ಣರು ಈ ಉದಾಹರಣೆಯನ್ನು ಕೊಡುತ್ತಾರೆ: "ಒಂದು ಮುಂಗುಸಿ ಗೋಡೆಯನ್ನು ಏರುವಷ್ಟರಲ್ಲಿ, ಅದರ ಬಾಲಕ್ಕೆ ಕಟ್ಟಿದ ಇಟ್ಟಿಗೆಯಿಂದಾಗಿ ಅದು ಮೇಲೇರಿದಷ್ಟೂ ಮತ್ತೆ ಕೆಳಗೆ ಬರುತ್ತದೆ." ಅದೇ ರೀತಿ ಸಂಸ್ಕಾರಗಳೆಂಬ ಇಟ್ಟಿಗೆಯ ಭಾರ ನಮ್ಮೊಳಗಿರುವುದರಿಂದ, ಸಾಧನೆಯ ಹಾದಿಯಲ್ಲಿ ಮೇಲೇರ ಲಾಗುತ್ತಿಲ್ಲ. ಪೂರ್ವಸಂಸ್ಕಾರಗಳ ಹಿಡಿತ ಅದೆಷ್ಟು ಪ್ರಬಲವಾದುದೆಂದರೆ ಒಮ್ಮೆ ಒಬ್ಬ ವ್ಯಕ್ತಿ ಮೀನಿನ ವಾಸನೆಗೆ (ಪ್ರಾಪಂಚಿಕ ಭೋಗ ಸುಖ) ಒಗ್ಗಿಕೊಂಡನೆಂದರೆ ಹೂವಿನ ಸುಗಂಧವೂ (ಆಧ್ಯಾತ್ಮಿಕ ಯೋಗ) ಅವನಿಗೆ ಇಷ್ಟವಾಗುವುದಿಲ್ಲ. ಸಂಸ್ಕಾರಗಳ ಹಿಡಿತ ಅದೆಷ್ಟು ಪ್ರಬಲವಾದುದೆಂದರೆ, "ನಾವು ಹುಲಿಗಳು, ಕುರಿಗಳಲ್ಲ" ಎಂದು ಎಷ್ಟೇ ಬಾರಿ ಕೇಳಿದ್ದರೂ ಮನಸ್ಸು ಅದನ್ನು ಮರೆತುಬಿಡುತ್ತದೆ. ಸಂಸ್ಕಾರವಶರಾಗಿರುವವರೆಗೆ ನಾವು ಭಗವದಿಚ್ಛೆಯಂತೆ ನಡೆಯುವುದು ದೂರದ ಮಾತು. ಸಂಸ್ಕಾರಗಳ ಅಥವಾ ವಾಸನೆಗಳ ಬಿಗಿಹಿಡಿತದಿಂದ ಪಾರಾಗಲು ಹೊಸ ಸಂಸ್ಕಾರಗಳನ್ನು ಬಲವಾಗಿ ರೂಢಿಸಿಕೊಳ್ಳಬೇಕು. **ಸಜ್ಜನರ ಸಂಗ, ನಾಮಗುಣ ಕೀರ್ತನೆ, ವಿವೇಕ ವಿಚಾರ**, ಆಗಾಗ **ಏಕಾಂತವಾಸ** ಮತ್ತು **ಪ್ರಾರ್ಥನೆ**ಗಳನ್ನು ಹೆಚ್ಚೆಚ್ಚು ಮಾಡುತ್ತ ಭಗವಂತನ ಬಳಿ ಕರೆದುಕೊಂಡು ಹೋಗುವ ಹೊಸ ಸಂಸ್ಕಾರಗಳನ್ನು ರೂಢಿಸಿಕೊಳ್ಳಬೇಕು. ಶುದ್ಧ ಸಂಸ್ಕಾರಗಳಿಲ್ಲದೆ ಭಗವಂತನ ಸತತ ಸ್ಮರಣೆ ಸಾಧ್ಯವಾಗುವುದಿಲ್ಲ. "Thou shalt love me with all thy heart, soul and mind" – **"ನೀನು ನಿನ್ನ ಹೃದಯ, ಆತ್ಮ ಮತ್ತು ಮನಸ್ಸುಗಳನ್ನು ಸಂಪೂರ್ಣವಾಗಿ ನನಗೆ ಸಮರ್ಪಿಸುತ್ತ ಪ್ರೀತಿಸು"** ಎಂದು ಕ್ರಿಸ್ತ ಆದೇಶಿಸುತ್ತಾನೆ. ಹೃದಯ, ಮನಸ್ಸು ಬುದ್ಧಿಗಳಿಂದ ಸತತ ಭಗವಂತನ ಸ್ಮರಣೆ ಸಾಧ್ಯವಾಗ ಬೇಕಾದರೆ ನಮ್ಮಲ್ಲಿ ಅಂತರ್ಗತವಾಗಿರುವ ಪೂರ್ವವಾಸನೆಗಳನ್ನು ನಾವು ದಹಿಸಿಹಾಕಲೇಬೇಕಾಗುತ್ತದೆ.

**ನನ್ನ ಅಹಂಕಾರವೆಲ್ಲ ಮುಳುಗಲಶ್ರುಜಲದಲಿ:** ಅಹಂಕಾರದಿಂದಾಗಿ ಮನುಷ್ಯ ಭಗವಂತನಿಂದ ಬೇರೆಯಾಗುತ್ತಾನೆ. ಭಗವಂತ ಕಾಣಿಸದಿರಲು ಅಹಂಕಾರ ಕಾರಣ. ಅಹಂಕಾರ ನಾಶವಾದಾಗ ಜೀವನೇ ಶಿವನಾಗುತ್ತಾನೆ. ಎಲ್ಲ ವಸ್ತುಗಳೂ ಮನುಷ್ಯನಿಗೆ ಅಹಂಕಾರವನ್ನು ಉಂಟುಮಾಡುತ್ತವೆ. ಅನ್ನಮದ, ಅರ್ಥಮದ, ಅಖಿಲ ವೈಭವದ ಮದ, ಪ್ರಾಯದ ಮದ, ರೂಪಮದ, ತನ್ನ ಸತ್ವದ ಮದ, ಧಾತ್ರಿ(ಭೂಮಿ) ವಶವಾದ ಮದ – ಹೀಗೆ ಅಹಂಕಾರದ ಸಂತತಿ ಬೆಳೆಯುತ್ತಾ ಹೋಗುತ್ತದೆ. ಮೇಲಾಗಿ ಎಲ್ಲವನ್ನೂ ತ್ಯಜಿಸಿದವನಿಗೆ, "ನಾನು ತ್ಯಾಗಿ, ನಾನು ಪವಿತ್ರ, ನಾನು ತಪಸ್ವಿ" ಎಂಬ ಅಹಂಕಾರ ಬರಬಹುದು. ಅದು ಹೇಗೆಂದರೆ ಆಲದ ಮರ ವನ್ನು ಎಷ್ಟು ಬಾರಿ ಕತ್ತರಿಸಿದರೂ ಅದು ಮತ್ತೆ ಚಿಗುರಿಕೊಳ್ಳುವಂತೆ. ಶ್ರೀರಾಮಕೃಷ್ಣರು ಹೇಳುತ್ತಾರೆ, "ಆ 'ದುಷ್ಟ ಅಹಂ', ಕಚ್ಚಾ ಅಹಂ, 'ದಾಸ ಅಹಂ' ಆಗಿ ಬಿದ್ದಿರಲಿ." "ನಾನು ದಾಸ, ನಾನು ಭಗವಂತನ ಮಗು ಎನ್ನುವುದು ಪಕ್ವ ಅಹಂ. ನಾನು ಜ್ಞಾನಿ, ನಾನು ಸದ್ಗುಣಿ, ನಾನು ಇಂತಹ ಕುಲದಲ್ಲಿ ಹುಟ್ಟಿದವನು ಎನ್ನುವುದೆಲ್ಲ ಅಪಕ್ವ ಅಹಂ." "ಭಗವಂತ ನಮ್ಮ ಹೃದಯದಲ್ಲಿ ವಾಸ ಮಾಡಲು ಬರುತ್ತಾನೆ. ಆದರೆ ಅಲ್ಲಿ ಅದಾಗಲೇ, 'ನಾನು ನನ್ನದು' ಎಂಬುದು ಅತ್ಯಂತ ಸಂಭ್ರಮದಿಂದ ನೆಲಸಿರುವುದನ್ನು ನೋಡಿ, ತನಗೆ ಸ್ಥಳವಿಲ್ಲವೆಂದು ಅವನು ಮರೆಯಾಗುತ್ತಾನೆ. ಎಲ್ಲವೂ ಭಗವದಿಚ್ಛೆಯಂತೆ ನಡೆಯುತ್ತಿದ್ದರೂ, ಮೂರ್ಖ ಜೀವಿಯು ಅದರ ಮೇಲೆ 'ನಾನು, ನನ್ನದು' ಎನ್ನುವ ಮೊಹರನ್ನು ಹಾಕುತ್ತಾನೆ." **"ನಿನ್ನ ಇಚ್ಛೆಯ ನೀನು ಪೂರೈಸುತಿರಲು, ತಮ್ಮ ಗೈಮೆಯಿದೆಂದು ತಿಳಿವರೀ ಜನರು"** ಎನ್ನುವುದು 'ಶ್ರೀರಾಮಕೃಷ್ಣ ವಚನವೇದ' ದ ಒಂದು ಹಾಡಿನ ಸಾಲು.

"ಎಲ್ಲಿಯವರೆಗೆ ರೋಗಿಯ ಕಾಯಿಲೆ ವಾಸಿಯಾಗುವುದಿಲ್ಲವೋ, ಅಲ್ಲಿಯವರೆಗೆ ವೈದ್ಯನು ಅವನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡುವುದಿಲ್ಲ. ಅಂತೆಯೇ ಅಹಂಕಾರ ಲೇಶಮಾತ್ರವಿರುವವರೆಗೂ ಭವಚಕ್ರದಿಂದ ಬಿಡುಗಡೆಯೇ ಇಲ್ಲ" ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಆದ್ದರಿಂದ ಯಾವ ಕೆಲಸಗಳು ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿಗಳಿಂದ ನಡೆಯುತ್ತಿರುವುವೋ ಅವೆಲ್ಲವೂ ಭಗವದಿಚ್ಛೆಯಿಂದ ಆಗುತ್ತಿವೆಯೇ ಹೊರತು, ತನ್ನ ಕರ್ತೃತ್ವದಿಂದ ಅಲ್ಲ ಎಂದು ಸಾಧಕ ಮನಗಾಣಬೇಕು. ಶ್ರೀರಾಮಕೃಷ್ಣರ ಕಥೆಯಲ್ಲಿ ಬರುವ ನೇಯ್ಗೆಯವನಂತೆ, ರಾಮನ ಇಚ್ಛೆಯಿಂದ ಪ್ರತಿಯೊಂದೂ ನಡೆಯುತ್ತಿರುವುದೆಂದು ಭಾವಿಸಬೇಕು. **ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ** – "ಅರ್ಜುನಾ, ಎಲ್ಲ ರೀತಿಯಲ್ಲಿಯೂ ಭಗವಂತನಲ್ಲಿಯೇ ಶರಣಾಗು" ಎಂದು ಶ್ರೀಕೃಷ್ಣ ಅರ್ಜುನನಿಗೆ ಹೇಳುವಂತೆ, ಭಗವಂತನಲ್ಲಿ ಸಂಪೂರ್ಣ ಶರಣಾಗಬೇಕು. ಶ್ರೀರಾಮಕೃಷ್ಣರು ಹೇಳುವಂತೆ, 'ತಿಂದು ಎಸೆದ ಎಂಜಲೆಲೆಯ ಹಾಗೆ' ಭಗವಂತನ ಇಚ್ಛೆಗೆ ಶಿರಬಾಗಿ ದೀನನಾಗಿರಬೇಕು. "ಭಗವತ್ಕೃಪೆಯ ಜಲ ಅಹಂಕಾರವಿಲ್ಲದ, ನಮ್ರವಾದ ತಗ್ಗಿನಲ್ಲಿ ಸಂಗ್ರಹವಾಗು ತ್ತದೆ, ಅಹಂಕಾರವೆಂಬ ದಿನ್ನೆಯ ಮೇಲಲ್ಲ", "ಜೀವಿ ಅಹಂಕಾರದಿಂದ ಪಾರಾಗಲು ಭಗವಂತನಲ್ಲಿ ಬಹಳವಾಗಿ ಕಂಬನಿಗರೆಯ ಬೇಕು... ಪರಿಪೂರ್ಣ ಅಹಂಕಾರರಾಹಿತ್ಯವನ್ನೇ ನಾವು ನಿರ್ವಾಣ, ಕೈವಲ್ಯ, ಪರಮಪದ, ಸಾಕ್ಷಾತ್ಕಾರ ಎಂದೆಲ್ಲ ಕರೆಯುವುದು" – ಇವು ನಿರಹಂಕಾರದ ಬಗ್ಗೆ ಶ್ರೀರಾಮಕೃಷ್ಣರು ಹೇಳಿರುವ ಕೆಲವು ಮಾತುಗಳು.

# ಧರ್ಮಸಾಮರಸ್ಯ

ಬ್ರಹ್ಮಚಾರಿ ನಿಗಮಚೈತನ್ಯ

ಧರ್ಮಸಾಮರಸ್ಯವೆಂಬುದು ಶ್ರೀರಾಮಕೃಷ್ಣರ ಉಪದೇಶಗಳಲ್ಲಿ ವಿಶಿಷ್ಟಸ್ಥಾನವನ್ನು ಪಡೆದಿದೆ. ಇದನ್ನು ಸಂಗ್ರಹಿಸಿರುವ ಲೇಖಕರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಭಗವಾನ್ ಶ್ರೀರಾಮಕೃಷ್ಣ ಪರಮಹಂಸ ದೇವರು ತಮ್ಮ ಜೀವಿತದಲ್ಲಿ ಹಿಂದೂಧರ್ಮ ಮತ್ತು ಅದರ ವಿವಿಧ ಮತ, ಪಂಗಡಗಳ ಎಲ್ಲಾ ಸಾಧನೆಗಳನ್ನು ಮಾಡಿ, ಇರುವ ಒಬ್ಬನೇ ಭಗವಂತನ ಸಾಕ್ಷಾತ್ಕಾರವನ್ನು ಮಾಡಿಕೊಂಡಿದ್ದಾರೆ. ವೇದಾಂತ ಸಾಧನೆ, ತಂತ್ರಸಾಧನೆ, ವೈಷ್ಣವ ಸಾಧನೆ, ಶಾಕ್ತ, ಶೈವ, ರಾಮಾಯತ ಮತ, ಮಧುರ ಭಾವ, ಸಖ್ಯ ಭಾವ, ವಾತ್ಸಲ್ಯ ಭಾವ, ಇದೂ ಅಲ್ಲದೇ ಇಸ್ಲಾಂ ಸಾಧನೆ ಮತ್ತು ಕ್ರೈಸ್ತ ಧರ್ಮಗಳ ಸಾಧನೆಯನ್ನು ಕೂಡ ಮಾಡಿದ್ದಾರೆ. ಕೊನೆಗೆ, "ನಾನು ಒಬ್ಬನೇ ಭಗವಂತನನ್ನು, ವಿವಿಧ ಮಾರ್ಗಗಳ ಮೂಲಕ ಕಂಡು ಕೊಂಡಿದ್ದೇನೆ" ಎಂದು ಜಗತ್ತಿಗೆ ಸಾರಿ ಹೇಳಿದ್ದಾರೆ.

ಅವರು ಹೀಗೆ ಹೇಳುತ್ತಾರೆ: "ನಾನು ಪ್ರತಿಯೊಂದು ಧರ್ಮವನ್ನೂ – ಹಿಂದೂಧರ್ಮ, ಮಹಮ್ಮದೀಯಧರ್ಮ, ಕ್ರೈಸ್ತಧರ್ಮ ಗಳನ್ನು ಅನುಸರಿಸಿ ನೋಡಬೇಕಾಯಿತು. ಜೊತೆಗೆ ಶಾಕ್ತ, ವೈಷ್ಣವ, ವೇದಾಂತ ಈ ಮಾರ್ಗಗಳಲ್ಲೂ ನಡೆಯಬೇಕಾಗಿ ಬಂತು. ಇರತಕ್ಕವನು ಒಬ್ಬನೇ ಭಗವಂತ. ಆತನ ಕಡೆ ಎಲ್ಲರೂ ಬರುತ್ತಿದ್ದಾರೆ; ಆದರೆ ವಿವಿಧ ಮಾರ್ಗಗಳಿಂದ ಅಷ್ಟೆ."

### ಧರ್ಮಸಾಮರಸ್ಯದ ಬಗ್ಗೆ ಶ್ರೀರಾಮಕೃಷ್ಣರ ಬೋಧನೆಗಳು

೧) ಒಂದು ಕೊಳಕ್ಕೆ ಮೂರು ನಾಲ್ಕು ಘಟ್ಟಗಳಿವೆ ಎಂದು ಇಟ್ಟುಕೊಳ್ಳಿ. ಒಂದು ಘಟ್ಟದಲ್ಲಿ ಹಿಂದೂಗಳು ನೀರು ಕುಡಿಯುತ್ತಾರೆ. ಅವರು ಅದನ್ನು 'ಜಲ' ಎಂದು ಕರೆಯುತ್ತಾರೆ. ಇನ್ನೊಂದರಲ್ಲಿ ಮುಸಲ್ಮಾನರು ನೀರು ಕುಡಿಯುತ್ತಾರೆ, ಅವರು ಅದನ್ನು 'ಪಾನಿ' ಎಂದು ಕರೆಯುತ್ತಾರೆ, ಮತ್ತೊಂದರಲ್ಲಿ ಕ್ರೈಸ್ತರು ನೀರು ಕುಡಿಯುತ್ತಾರೆ, ಅವರು ಅದಕ್ಕೆ ಹೇಳುತ್ತಾರೆ, 'ವಾಟರ್' ಎಂಬುದಾಗಿ. ಈ ಮೂವರೂ ಕುಡಿಯುವುದೂ ಒಂದೇ ನೀರನ್ನು, ಆದರೆ ಹೆಸರಿನಲ್ಲಿ ಮಾತ್ರ ಭೇದ. ಹಾಗೆಯೇ ಕೆಲವರು ಭಗವಂತನನ್ನು 'ಅಲ್ಲಾ', ಇನ್ನು ಕೆಲವರು 'ಗಾಡ್', ಮತ್ತೆ ಕೆಲವರು 'ಬ್ರಹ್ಮ', ಮತ್ತೆ ಕೆಲವರು 'ಕಾಳಿ', ಇನ್ನು ಬೇರೆಯವರು 'ರಾಮ' 'ಹರಿ' 'ಯೇಸು' 'ದುರ್ಗಾ' ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಇದೇ ರೀತಿಯಾಗಿ ಸಾಧಕರು ಬೇರೆ ಬೇರೆ ಧರ್ಮಗಳ ಮೂಲಕ ಒಬ್ಬನೇ ಭಗವಂತನನ್ನು ಪಡೆಯುತ್ತಾರೆ.



೨) ಕುಂಬಾರನ ಅಂಗಡಿಯಲ್ಲಿ ಮಡಕೆ, ಕುಡಿಕೆ, ತಟ್ಟೆ ಮೊದಲಾದ ಹಲವು ಆಕಾರದ ಹಲವು ಗಾತ್ರದ ಪಾತ್ರೆಗಳು ಇರುತ್ತವೆ. ಆದರೆ ಎಲ್ಲವೂ ಆಗಿರುವುದು ಒಂದೇ ಜೇಡಿಮಣ್ಣಿನಿಂದ. ಇದರಂತೆಯೇ ಬೇರೆ ಬೇರೆ ಧರ್ಮಗಳ ಮೂಲಕ, ಬೇರೆ ಬೇರೆ ನಾಮರೂಪಗಳನ್ನು ಉಪಾಸನೆ ಮಾಡಿ ಜನರು ಒಬ್ಬನೇ ಭಗವಂತನನ್ನು ಪಡೆಯುತ್ತಾರೆ.

೩) ಒಂದೇ ವಿಧದ ಸಕ್ಕರೆಯಿಂದ ಹಲವು ಆಕಾರದ ವಸ್ತುಗಳನ್ನು ತಯಾರಿಸುವಂತೆ, ಒಬ್ಬನೇ ಭಗವಂತನನ್ನು ಹಲವು ನಾಮ ಮತ್ತು ರೂಪಗಳಿಂದ, ಹಲವು ಧರ್ಮಗಳ ಮೂಲಕ ಜನರು ಸಾಕ್ಷಾತ್ಕರಿಸಿಕೊಳ್ಳುತ್ತಾರೆ.

೪) ವಿವಿಧ ರೀತಿಯ ಒಡವೆಗಳನ್ನು ಚಿನ್ನದಿಂದ ತಯಾರಿಸುತ್ತಾರೆ. ಎಲ್ಲಾ ಒಡವೆಗಳಲ್ಲಿರುವ ಚಿನ್ನ ಒಂದೇ ಆಗಿದ್ದರೂ, ಅದನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಅದಕ್ಕೆ ಹಲವು ಆಕಾರಗಳಿವೆ. ಇದೇ ರೀತಿಯಾಗಿ ಒಂದೇ ದೇವರನ್ನು ಬೇರೆ ಬೇರೆ ಪ್ರದೇಶಗಳಲ್ಲಿ, ಬೇರೆಬೇರೆ ಕಾಲದಲ್ಲಿ, ಬೇರೆ ಬೇರೆ ಧರ್ಮಗಳ ಮೂಲಕ ಜನರು ಪೂಜಿಸುತ್ತಾರೆ.